# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ವಾರ್ಡ್ ಸಂಖ್ಯೆ.28, ಕಮ್ಮನಹಳ್ಳಿಗೆ ಸಂಬಂಧಿಸಿದಂತೆ ವಾರ್ಡ್ ಸಮಿತಿಯ ಸಭೆಯನ್ನು ದಿನಾಂಕ: 05-03-2022 ರಂದು ಆಯೋಜಿಸಿದ್ದು, ಸದರಿ ವಾರ್ಡ್ ಸಮಿತಿ ಸಭೆಯ ನಡವಳಿಗಳು**

1. ಶ್ರೀ ನಾಗಪ್ಪ ಕಮತಿ (ನೋಡಲ್ ಅಧಿಕಾರಿ)
2. ಶ್ರೀ ಎಸ್. ರಾಜನ್ (ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿಗಳು)
3. ಶ್ರೀ ಹನುಮಂತಪ್ಪ, ಹಿರಿಯ ಆರೋಗ್ಯ ನಿರೀಕ್ಷಕರು,
4. ಶ್ರೀ ನಂಜುಂಡಯ್ಯ, ಸಹಾಯಕ ಅಭಿಯಂತರರು, ಬಿ.ಡ.ಬ್ಲ್ಯೂ.ಎಸ್.ಎಸ್.ಬಿ ಇಲಾಖೆ,
5. ಶ್ರೀಮತಿ ಶ್ರೀಲಕ್ಷ್ಮಿ, ಕಿರಿಯ ಆರೋಗ್ಯ ನಿರೀಕ್ಷಕರು,
6. ಶ್ರೀ ಶ್ರೀನಿವಾಸ್, ಕಂದಾಯ ನಿರೀಕ್ಷಕರು,
7. ಶ್ರೀ ಜೋಶ್ವಾ, ಕರ ವಸೂಲಿಗಾರರು,
8. ಶ್ರೀಮತಿ ರಾಜಶ್ರೀ, ಕಲ್ಯಾಣ ಇಲಾಖೆ,
9. ಶ್ರೀ ಮಂಜುನಾಥ ಪಿ, ಸ್ಥಳೀಯರು,
10. ಶ್ರೀ ಪ್ರಕಾಶ್, ಸ್ಥಳೀಯರು,
11. ಶ್ರೀ ಸುರೇಶ್, ಸ್ಥಳೀಯರು,
12. ಶ್ರೀ ಕೆಂಪರಾಜ, ಸ್ಥಳೀಯರು,

ಈ ಸಭೆಗೆ ಹಾಜರಾಗಿದ್ದ ಅಧ್ಯಕ್ಷರು (ನೋಡೆಲ್ ಅಧಿಕಾರಿ) ಹಾಗೂ ಅಧಿಕಾರಿಗಳನ್ನು ವಾರ್ಡ್‌ನ ಸದಸ್ಯ ಕಾರ್ಯದರ್ಶಿ ಹಾಗೂ ಸಂಚಾಲಕರು, ವಾರ್ಡ್ ಕಮಿಟಿ ಸಮಿತಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ನೌಕರರು ಹಾಗೂ ಸದಸ್ಯರುಗಳನ್ನು ಸ್ವಾಗತ ಕೋರಿ, ಸಭೆಯನ್ನು ಪ್ರಾರಂಭಿಸಲಾಯಿತು.

1) **ಶ್ರೀ ಕೆಂಪರಾಜ, ಸ್ಥಳೀಯರು ಮಾತನಾಡುತ್ತಾ,**

- ಜಯಲಕ್ಷ್ಮಿ ಶಾಲೆಯ ರಸ್ತೆಯಲ್ಲಿ ಬ್ಲಾಕ್‌ಸ್ಪಾಟ್‌ನಲ್ಲಿ ಕಸ ತುಂಬಿದ್ದು, ಸದರಿ ಸ್ಥಳದಲ್ಲಿರುವ ಬ್ಲಾಕ್‌ಸ್ಪಾಟ್‌ನಲ್ಲಿ ಬಿದ್ದಿರುವ ಕಸವನ್ನು ತೆರವುಗೊಳಿಸಿ, ಬ್ಲಾಕ್‌ಸ್ಪಾಟ್ ಜಾಗದಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಿ, ಕಸ ಎಸೆಯುವವರ ವಿರುದ್ಧ ಕ್ರಮ ವಹಿಸಲು ಸಭೆಗೆ ತಿಳಿಸಿದರು.
- ಕಮ್ಮನಹಳ್ಳಿ ರಸ್ತೆಯ ಪಾದಾಚಾರಿ ಮಾರ್ಗದಲ್ಲಿ ಕಸವನ್ನು ಎಲ್ಲಂದರಲ್ಲಿ ಎಸೆದು ಹೋಗುತ್ತಿದ್ದು, ಇದನ್ನು ತಡೆಗಟ್ಟಲು ಆರೋಗ್ಯ ಇಲಾಖೆಗೆ ತಿಳಿಸಿದರು.

2) **ಶ್ರೀ ಮಂಜುನಾಥ ಪಿ, ಸ್ಥಳೀಯರು ಮಾತನಾಡುತ್ತಾ,**

- ಕೋದಂಡ ರಾಮ ರಸ್ತೆಯಲ್ಲಿ ಭಾರಿ ವಾಹನ ಚರಂಡಿ ಮೇಲೆ ಹತ್ತಿ, ಚರಂಡಿಯ ಕಲ್ಲು ಮುರಿದಿದ್ದು, ಅದನ್ನು ಸರಿಪಡಿಸಲು ಸಭೆಗೆ ತಿಳಿಸಿದರು.
- ಡಾ|| ರಾಜ್‌ಕುಮಾರ್ ರಸ್ತೆಯಲ್ಲಿ ವಾಸಿಸುತ್ತಿರುವ ಸಾರ್ವಜನಿಕರಿಗೆ ನೀರಿನ ಅಭಾವವಿದ್ದು ಹೊಸದಾಗಿ ಒಂದು ಬೋರ್‌ವೆಲ್ ಕೊರೆದರೆ ಸಾರ್ವಜನಿಕರಿಗೆ ಅನುಕೂಲವಾಗುವುದಾಗಿ ಸಭೆಗೆ ತಿಳಿಸಿದರು.

3) **<u>ಶ್ರೀ ಪ್ರಕಾಶ್, ಸ್ಥಳೀಯರು, ಮಾತನಾಡುತ್ತಾ,</u>**

- ಜೈ ಭಾರತ್‌ನಗರ ಸುತ್ತಮುತ್ತಲಿನ ರಸ್ತೆಗೆ ಡಾಂಬರೀಕರಣ ಮಾಡಿ, ಬಿಡಬ್ಲ್ಯೂಎಸ್‌ಎಸ್‌ಬಿ ವತಿಯಿಂದ ಛೇಂಬರ್‌ನಲ್ಲಿರುವ ಶಿಲ್ಟ್‌ನ್ನು ತೆಗೆದು ರಸ್ತೆಯ ಮೇಲೆ ಹಾಗೆ ಇಟ್ಟಿರುವುದು ಕಂಡುಬಂದಿದ್ದು ಇದರಿಂದ ಸಾರ್ವಜನಿಕರ ಹಾಗೂ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿದ್ದು, ಅದನ್ನು ಕೂಡಲೇ ತೆರವುಗೊಳಿಸಲು ಸಭೆಗೆ ತಿಳಿಸಿದರು.

4) **<u>ಶ್ರೀ ಸುರೇಶ್, ಸ್ಥಳೀಯರು, ಮಾತನಾಡುತ್ತಾ,</u>**

- ಟ್ಯಾಂಕ್‌ಬಂಡ್ ರಸ್ತೆಯನ್ನು ಬಿಡಬ್ಲ್ಯೂಎಸ್‌ಎಸ್‌ಬಿ ರವರು ಸ್ಯಾನಿಟರಿ ಲೈನ್ ಹಾಕಲು ರಸ್ತೆಯನ್ನು ಅಗೆದಿದ್ದು, ಕೂಡಲೇ ರಸ್ತೆಗೆ ಡಾಂಬರೀಕರಣ ಮಾಡಲು ಸಭೆಗೆ ತಿಳಿಸಿದರು.
- ಕೆ.ಹೆಚ್.ಬಿ ಕಾಲೋನಿಯ ಸುತ್ತಮುತ್ತಲು ಬಿದ್ದಿರುವ ಕಸ ಮತ್ತು ಗಿಡಗಳನ್ನು ತೆಗೆಯಲು ಕ್ರಮ ವಹಿಸಲು ತಿಳಿಸಿದರು.

ಇಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವ ಎಲ್ಲಾ ವಿಷಯಗಳ ಬಗ್ಗೆ ಆಯಾ ಇಲಾಖೆಯ ಅಧಿಕಾರಿ / ನೌಕರರುಗಳು ಕ್ರಮ ಕೈಗೊಂಡು ಮುಂದಿನ ಸಭೆಗೆ ತಿಳಿಸಲು ಸೂಚಿಸಿದರು.

**ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು**
**ವಾರ್ಡ್ ಸಂಖ್ಯೆ.28, ಕಮ್ಮನಹಳ್ಳಿ,**

**ನೋಡಲ್ ಅಧಿಕಾರಿ**
**ವಾರ್ಡ್ ಸಂಖ್ಯೆ.28, ಕಮ್ಮನಹಳ್ಳಿ**

**<u>ಪ್ರತಿಯನ್ನು</u>**

1) ಕಾರ್ಯಪಾಲಕ ಅಭಿಯಂತರರು, ಸರ್ವಜ್ಞನಗರ ವಿಭಾಗ, ಬಿ.ಬಿ.ಎಂ.ಪಿ
2) ಕಾರ್ಯಪಾಲಕ ಅಭಿಯಂತರರು, ಯೋಜನೆ (ಪೂರ್ವ ವಲಯ) ಬಿ.ಬಿ.ಎಂ.ಪಿ
3) ಕಾರ್ಯಪಾಲಕ ಅಭಿಯಂತರರು, ವಿದ್ಯುತ್ (ಪೂರ್ವ ವಲಯ) ಬಿ.ಬಿ.ಎಂ.ಪಿ
4) ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ.
5) ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ
6) ಕಾರ್ಯಪಾಲಕ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯಗಳು.ಬಿ.ಬಿ.ಎಂ.ಪಿ
7) ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ, ಬಿ.ಬಿ.ಎಂ.ಪಿ
8) ತೋಟಗಾರಿಕಾ ಅಧೀಕ್ಷಕರು, (ಪೂರ್ವ ವಲಯ)
9) ಆರೋಗ್ಯ ವೈದ್ಯಾಧಿಕಾರಿಗಳು, (ಪೂರ್ವ ವಲಯ)
10) ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣಾ ವಿಭಾಗ
11) ಸಹಾಕಯ ಕಂದಾಯ ಅಧಿಕಾರಿ. ಮಾರುತಿ ಸೇವಾ ನಗರ ಉಪವಿಭಾಗ
12) ಕಲ್ಯಾಣಾದಿಕಾರಿಗಳು, (ಪೂರ್ವ ವಲಯ) ಬಿ.ಬಿ.ಎಂ.ಪಿ
13) ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಪೂರ್ವ ವಲಯ) ಬಿ.ಬಿ.ಎಂ.ಪಿ
14) ಪೋಲಿಸ್ ಇನ್ಸ್‌ಪೆಕ್ಟರ್, ಬಾಣಸವಾಡಿ.
15) ಪೋಲಿಸ್ ಇನ್ಸ್‌ಪೆಕ್ಟರ್,(ಸಂಚಾರಿ), ಬಾಣಸವಾಡಿ.
16) ಕಛೇರಿ ಪ್ರತಿ.